ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಕೀಲರಿಂದಃ

1 ನೇ ಪ್ರತಿವಾದಿರವರುನನಗೆ ಸುಮಾರು 10-11 ವರ್ಷಗಳಿಂದ ತಿಳಿದಿರುತ್ತದೆ. ನಾನು 1 ನೇ ಪ್ರತಿವಾದಿರವರ ಭೋಗ್ಯದಲ್ಲಿ ಇದ್ದರಿಂದ ಅವತ್ತಿನಿಂದ ಇಲ್ಲಿಯವರೆಗೆ ಸಂಬಂಧ ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿರವರ ಅಕ್ಕಪಕ್ಕದ ಊರಿನವರು ಎಂದರೆ ಸರಿ. ನಾನು ಮತ್ತು ಅವರ ಒಳ್ಳೆಯ ವಿಶ್ವಾಸದಲ್ಲಿ ಇದ್ದ ಕಾರಣ ಅವರು ನನಗೆ ಭೋಗ್ಯಕ್ಕೆ ಮನೆ ಕೊಟ್ಟಿದ್ದರು ಎಂದರೆ ಸರಿ. ಶಿವಲಿಂಗಯ್ಯವರು ಜೆರಾಕ್ಸ್ ಮತ್ತು ಸ್ಟೇಷನರಿ ಅಂಗಡಿ ಇಟ್ಟುಕೊಂಡಿದ್ದು ಅದರಿಂದ ನಷ್ಟ ಉಂಟಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಹಣಕಾಸಿನ ಅವಶ್ಯಕತೆ ಇದ್ದುದರಿಂದ ನನ್ನ ಬಳಿ ಸಹಾಯ ಕೇಳಿರುತ್ತಾರೆ ಎಂದರೆ ಸರಿಯಲ್ಲ.

ವಾದಿರವರು ನನಗೆ ಅಕ್ಕನ ಮಗಳಾಗಬೇಕು. ವಾದಿ ನನ್ನ ಅಕ್ಕನ ಮಗಳಾಗಿದ್ದ ರಿಂದ 1 ನೇ ಪ್ರತಿವಾದಿಗೆ ಅವರ ಕಡೆಯಿಂದ ಹಣವನ್ನು ಬಡ್ಡಿಗೆ ಕೊಡಿಸುತ್ತೇನೆ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿರವರು ನನ್ನ ಮೂಲಕ ವಾದಿ ಕಡೆಯಿಂದ 35 ಲಕ್ಷ ಹಣವನ್ನು ಸಾಲವಾಗಿ ಬಡ್ಡಿಗಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿರವರ ಬಳಿ ಹಣವನ್ನು ಸಾಲವಾಗಿ ಪಡೆದುಕೊಂಡಿದರಿಂದ ನಿಪಿ-1 ರ ಕರಾರು ಪತ್ರವನ್ನು ವಾದಿ ಹೇಳಿದಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಕರಾರು ಪತ್ರವನ್ನು ವಾದಿರವರು ಅವರಿಗೆ ಅನುಕೂಲವಾಗುವಂತೆ ಬಡ್ಡಿಯ ಹಣದ

ಬದಲಾಗಿ ಕರಾರು ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಬಡ್ಡಿ ವ್ಯವಹಾರ ನಡೆದಿರುತ್ತದೆಯೇ ಯಾವುದೇ ಮಾರಾಟಕ್ಕೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿರವರು ನಿಪಿ-1 ನ್ನು ತಯಾರಿಸುವ ಸಮಯದಲ್ಲಿ ನಾನು ಅವರ ಜೊತೆಯಲ್ಲಿಯೇ ಇದ್ದೆನು. ನಿಪಿ-1 ನ್ನು ತಯಾರಿಸುವ ಸಮಯದಲ್ಲಿ ಅದರ ಬರಹಗಾರರಾದ ಬೈರಯ್ಯನವರ ಕಛೇರಿಯಲ್ಲಿ ನಾನು ಸಹ ವಾದಿ ಜೊತೆ ಇದ್ದೆನು. 1 ನೇ ಪ್ರತಿವಾದಿರವರ ವಿಶ್ವಾಸವನ್ನು ನಾನು ದುರುಪಯೋಗ ಪಡಿಸಿಕೂಂಡು ವಾದಿಯ ಜೊತೆ ಶಾಮಿಲ್ ಆಗಿ ನಿಪಿ-1 ರ ಕರಾರು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.